# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಫೆಬ್ರವರಿ 2026** ಬೆಂಗಳೂರು, ಸಂಪುಟ 11, ಸಂಚಿಕೆ 10 ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ

Kannada monthly, **10 February 2026**, Bengaluru, Vol. 11, Issue No.10 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-
Published by: Karnataka Vipassana Prachara Samiti Trust.


## ಧಮ್ಮ ಪದಗಳು

"ಅಸುಭಾನುಪಸ್ಸಿಂ ವಿಹರಂತಂ
ಇಂದ್ರಿಯೇಸು ಸುಸಂವುತಂ
ಭೋಜನಮ್ಹಿ ಚಾಮತ್ತಯಿಂ
ಸದ್ಧಂ ಆರದ್ಧವೀರಿಯಂ,
ತಂ ವೇ ನಪ್ಪಸಹತಿ ಮಾರೋ
ವಾತೋ ಸೇಲಂವ ಪಬ್ಬತಂ.

ಅಶುಭವನ್ನು ಅರಿತು ಬದುಕುವವನನ್ನು, ಇಂದ್ರಿಯಗಳಲ್ಲಿ ಸಂಯಮಿ ಆಗಿರುವವನನ್ನು, ಆಹಾರ ಸೇವನೆಯಲ್ಲಿ ಮಿತ ಅರಿತವನನ್ನು, ಶ್ರದ್ಧಾವಂತನನ್ನು, ಯತ್ನಶೀಲನನ್ನು, ಬೆಟ್ಟದಂತಹ ಬಂಡೆಯನ್ನು ಗಾಳಿಯು ಏನೂ ಮಾಡಲಾಗದ ಹಾಗೆ ಅಂಥವನನ್ನು ಮಾರನು ವಶಪಡಿಸಿಕೊಳ್ಳಲಾರನು.

ಧಮ್ಮಪದ–8, ಜೋಡಿ ವರ್ಗ

# ಧಮ್ಮದ ಒಂದು ಹೊಸ ಯುಗ

**ಆಚಾರ್ಯ ಶ್ರೀ ಎಸ್.ಎನ್. ಗೋಯಂಕ (1924–2013)**

(1997 ಜನವರಿ 11ರಂದು ಭಾರತದ ಧಮ್ಮ ಗಿರಿಯಲ್ಲಿ ನಡೆದ ವಾರ್ಷಿಕ ಸಭೆಯ ಸಮಾರೋಪ ಭಾಷಣ. 'ಫಾರ್ ದ ಬೆನಿಫಿಟ್ ಆಫ್ ಮೆನಿ' ಇಂಗ್ಲಿಷ್ ಪುಸ್ತಕದಿಂದ ಅನುವಾದಿಸಲಾಗಿದೆ.)

ನನ್ನ ಪ್ರೀತಿಯ ಧಮ್ಮ ಮಕ್ಕಳೇ,

ಕಳೆದ ಕೆಲವು ದಿನಗಳಿಂದ ನೀವು ವಾರ್ಷಿಕ ಚರ್ಚೆಗಳನ್ನು ಮತ್ತು ಸಭೆಗಳನ್ನು ನಡೆಸಿದ್ದೀರಿ. ಪ್ರತಿಯೊಂದು ಸಂಸ್ಥೆಯೂ ಕೆಲವು ವಿಧಿಗಳು ಮತ್ತು ಆಚರಣೆಗಳನ್ನು ಹೊಂದಿರುತ್ತದೆ. ವಾರ್ಷಿಕ ಸಮ್ಮೇಳನಗಳು ಇವುಗಳ ಭಾಗವಾಗಿವೆ: ವರದಿಗಳನ್ನು ಓದಬೇಕು, ಸಮಿತಿಗಳನ್ನು ರಚಿಸಬೇಕು, ನಿರ್ಣಯಗಳನ್ನು ಅಂಗೀಕರಿಸಬೇಕು ಮತ್ತು ಉದ್ಘಾಟನೆ ಮತ್ತು ಸಮಾರೋಪ ಭಾಷಣ ಇರಲೇಬೇಕು.

ಆದರೆ ಇದು ಧಮ್ಮ ಸಂಸ್ಥೆ. ಕೇವಲ ವರ್ಷಕ್ಕೊಮ್ಮೆ ಮಾತ್ರವಲ್ಲ, ದಿನದಿಂದ ದಿನಕ್ಕೆ ಆತ್ಮಾವಲೋಕನದ ಪ್ರಕ್ರಿಯೆಯ ಅವಶ್ಯಕತೆ ನಮಗಿದೆ. ವರ್ಷದ ಪ್ರಾರಂಭದಲ್ಲಿ ಒಟ್ಟಿಗೆ ಸೇರಿ ಚಿಂತನಮಂಥನ, ಚರ್ಚೆ ನಡೆಸುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ ಇದೊಂದು ಆಚರಣೆ ಅಥವಾ ಸಂಪ್ರದಾಯ ಆಗದಿರುವಂತೆ ನೋಡಿಕೊಳ್ಳಿ. ಸಮ್ಮೇಳನದ ಫಲಿತಾಂಶಗಳು ನಿಜವಾಗಿಯೂ ಇತರರ ಪ್ರಯೋಜನಕ್ಕಾಗಿ ಎಂಬುದನ್ನು ಖಾತರಿಪಡಿಸಿ ಕೊಳ್ಳಿ. ಕೆಲವು ತಪ್ಪುಗಳನ್ನು ಮಾಡಿರಬಹುದು. ಈಗ ಆ ತಪ್ಪುಗಳು ಮುಂದೆ ಆಗದಿರುವಂತೆ ಎಚ್ಚರವಹಿಸಿ. ಕೆಲವು ಒಳ್ಳೆಯ ಅಂಶಗಳು, ಸದ್ಗುಣಗಳು ಇವೆ. ಸರಿ, ನಾವು ಅವುಗಳನ್ನು ಹೆಚ್ಚಿಸುವುದು ಹೇಗೆ?

ನಾವು ಪ್ರಯೋಗ ಮಾಡುತ್ತಿದ್ದೇವೆ. ಏಕೆಂದರೆ ಇದು ನನಗೂ ಹೊಸದು. ಲೇಡಿ ಸಯಾದೋ ಅವರಿಂದ ಇಲ್ಲಿಯವರೆಗೆ ನಮಗೆ ತಿಳಿದಿರುವ ಇತಿಹಾಸವು 2500 ವರ್ಷಗಳ ಹಿಂದಿನದು. ಮುಂದಿನ 2500 ವರ್ಷಗಳ ಕಾಲ ಧರ್ಮವು ಹರಡುವ ಕಾಲಘಟ್ಟದ ಪ್ರಾರಂಭದಲ್ಲಿ ನಾನಿರುವುದು ನನ್ನ ಅದೃಷ್ಟ. ಧಮ್ಮ(ಧರ್ಮ)ವು ಹರಡುತ್ತಿದೆ. ಬೆಳವಣಿಗೆಯ ಬಿಕ್ಕಟ್ಟು ಇರಲೇಬೇಕು; ಕಷ್ಟಗಳು, ಸಮಸ್ಯೆಗಳು ಇರುತ್ತವೆ. ನಾನು ಅಥವಾ ನನ್ನ ಧಮ್ಮ ಪುತ್ರರು ಅಥವಾ ಧಮ್ಮ ಪುತ್ರಿಯರು ತಪ್ಪುಗಳನ್ನು ಮಾಡಬಹುದು. ಆದರೆ ಆ ತಪ್ಪುಗಳಿಂದ ನಾವು ಕಲಿಯಬೇಕು.

ಕಳೆದ ವರ್ಷ ಕೆಲವು ಪ್ರಯೋಗಗಳನ್ನು ಮಾಡಿದೆವು; ಅವು ಒಳ್ಳೆಯ ಫಲಿತಾಂಶಗಳನ್ನು ನೀಡಿದವು. ನಾವು ಅವುಗಳಿಂದ ಕಲಿತೆವು. ಈ ವರ್ಷವೂ ಪ್ರಯೋಗ ಮಾಡುವುದನ್ನು ಮುಂದುವರಿಸೋಣ. ಹೆಚ್ಚು ಹೆಚ್ಚು ಜನರು ಅತ್ಯುನ್ನತ ಲಾಭ ಪಡೆಯುವಂತೆ ಸೇವೆ ಮಾಡುವುದೇ ಗುರಿ.

ಈ ವರ್ಷ ನಾವು ಪ್ರತೀ ಕೇಂದ್ರಕ್ಕೆ ಪ್ರತ್ಯೇಕ ಆಚಾರ್ಯರಿಗೆ ಪೂರ್ಣ ಜವಾಬ್ದಾರಿ ಕೊಡೋಣ. ಮುಂದಿನ ವರ್ಷ ಇತರರನ್ನು ಸೇವೆ ಮಾಡಲು ಕೇಳೋಣ. ಏಕೆಂದರೆ ನಾವು ಹೆಚ್ಚು ಹೆಚ್ಚು ಆಚಾರ್ಯರುಗಳನ್ನು ತರಬೇತುಗೊಳಿಸಬೇಕಾಗಿದೆ. ಕೇಂದ್ರವನ್ನು ನೋಡಿಕೊಳ್ಳುವ ಜವಾಬ್ದಾರಿಯಿಲ್ಲದ ಕೆಲವು ಆಚಾರ್ಯರುಗಳು ನಿರ್ದಿಷ್ಟ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಲು ಜವಾಬ್ದಾರಿ ವಹಿಸೋಣ. ಈ ರೀತಿಯಾಗಿ ನಾವು ಪ್ರಯೋಗ ಮಾಡುವುದನ್ನು ಮುಂದುವರಿಸೋಣ. ಆ ಮುಖೇನ ಧರ್ಮವನ್ನು ಹರಡುವ ಮಾದರಿಯ ಮಾರ್ಗಗಳನ್ನು ಮುಂದಿನ ಪೀಳಿಗೆಗೆ ನೀಡೋಣ.

ಇನ್ನೂ ಎರಡು ವರ್ಷಗಳಲ್ಲಿ 1999ನೇ ಇಸವಿ ಬರುತ್ತದೆ. ಇದು ಪ್ರಮುಖವಾದ ವರ್ಷ. ಇದು ನನ್ನ ಧಮ್ಮ ತಂದೆಯವರಾದ ಸಯಾಜಿ ಉ ಬಾ ಖಿನ್ ಅವರ ಜನ್ಮಶತಮಾನೋತ್ಸವ ವರ್ಷ ಮತ್ತು ನಾವು ಧಮ್ಮವನ್ನು ಮುಂದಿನ ಶತಮಾನಕ್ಕೆ ಕೊಂಡೊಯ್ಯುತ್ತೇವೆ. ವಿಪಶ್ಯನವು ಹರಡುವುದು ಎಷ್ಟೊಂದು ಗಟ್ಟಿಯಾಗಿ ಮತ್ತು ಪರಿಶುದ್ಧವಾಗಿ ಇರಬೇಕೆಂದರೆ, ಅದು ಶತಮಾನಗಳ ಕಾಲ ಬಹುಜನರ ಹಿತಕ್ಕಾಗಿ ಮತ್ತು ಪ್ರಯೋಜನಕ್ಕಾಗಿ ಜನರಿಗೆ ಸಹಾಯ ಮಾಡುವುದು ಮುಂದುವರಿಯಬೇಕು. ಧಮ್ಮವು ಹರಡುವುದಕ್ಕೆ ನಾವು ಒಳ್ಳೆಯ ವಾಹಕಗಳಾಗೋಣ. ಇನ್ನೂ ಉತ್ತಮವಾದ ಸೇವೆ ಮಾಡಲು ನೀವೆಲ್ಲರೂ ಧಮ್ಮದ ನಿಜವಾದ ಶಕ್ತಿಯನ್ನು ಮತ್ತು ಬಲವನ್ನು ಪಡೆಯಿರಿ. ಈ ಹಿಂದೆ ಏನನ್ನು ಮಾಡಲಾಗಿದೆಯೋ ಅದರ ಬಗ್ಗೆ ನನಗೆ ಸಂತೋಷವಿದೆ. ಆದರೆ ಅದು ಕೇವಲ ಒಳ್ಳೆಯ ಪ್ರಾರಂಭ; ಮಾಡಬೇಕಾದದ್ದು ಇನ್ನೂ ಬಹಳಷ್ಟಿದೆ.

ನಾವು ಪೂರ್ಣಗೊಳಿಸಿರುವ ಒಂದು ಕೆಲಸವೆಂದರೆ 'ಪರಿಯತ್ತಿ'ಯ (ಸಿದ್ಧಾಂತದ) ಕೆಲಸ. ದೇವನಾಗರಿ ಲಿಪಿಯಲ್ಲಿ ಸುಮಾರು 140 ಸಂಪುಟಗಳ ಪಾಲಿ ಸಾಹಿತ್ಯವನ್ನು ನಾವು ಸಂಪಾದಿಸಿದ್ದೇವೆ ಮತ್ತು ಪ್ರಕಟಿಸುತ್ತಿದ್ದೇವೆ. ಸಂಸ್ಕೃತ ಮತ್ತು ಇತರೆ ಭಾಷೆಗಳಲ್ಲಿ ಲಭ್ಯವಿರುವ ಬುದ್ಧರ ಎಲ್ಲಾ ಬೋಧನೆಗಳನ್ನು ಮತ್ತು ತಾಳೆಗರಿಯಲ್ಲಿ ಬರೆದಿರುವುದನ್ನು ಸಂಗ್ರಹಿಸಬಯಸುತ್ತೇವೆ. ಏಕೆಂದರೆ ಇವುಗಳೆಲ್ಲವುಗಳ ತುಲನಾತ್ಮಕ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಫಲದಾಯಕವಾದ ವಿಪಶ್ಯನ ವಿದ್ಯೆಯು ಈ ದೇಶದಿಂದ ಮತ್ತು ಇತರ ದೇಶಗಳಿಂದ ಏಕೆ ಕಣ್ಮರೆಯಾಯಿತು ಎಂಬುದನ್ನೂ ನಾವು ತನಿಖೆ ಮಾಡಬೇಕಾಗಿದೆ. ನಾವು ಯಾರನ್ನು ಖಂಡಿಸಬಯಸುವುದಿಲ್ಲ. ಆದರೆ ಇಂತಹ ಘಟನೆಗಳು ಭವಿಷ್ಯದಲ್ಲಿ ನಡೆಯದಿರುವಂತೆ ಎಚ್ಚರವಹಿಸಲು ಸತ್ಯವನ್ನು ಕಂಡು ಹಿಡಿಯಬೇಕಾಗಿದೆ.

ಇದನ್ನೆಲ್ಲಾ ಪೂರ್ಣಗೊಳಿಸಲು ನಾವು ಮಾಡಬೇಕಾದ ಕೆಲಸ ಬಹಳಷ್ಟಿದೆ. ಧಮ್ಮ ಕುಟುಂಬವು ಬೆಳೆಯುತ್ತಿದೆ ಮತ್ತು ಇನ್ನೂ ಹೆಚ್ಚಾಗುವುದನ್ನು ನಾನು ಬಯಸುತ್ತೇನೆ– ಕುಟುಂಬ ಯೋಜನೆ ನಮಗಲ್ಲ! ಏಕೆಂದರೆ ಧಮ್ಮವು ಹರಡಬೇಕಾಗಿದೆ. ಕುಟುಂಬವು ಹೆಚ್ಚು ಹೆಚ್ಚು

ದೊಡ್ಡದಾಗಬೇಕಾಗಿದೆ. ಈ ಸಾವಿರಾರು ಕೈಗಳು ನಿಜವಾಗಿ ಕೆಲಸ ಮಾಡಲು ಪರಿಶುದ್ಧ ಧರ್ಮದ ಎಲ್ಲಾ ಶಕ್ತಿ ಮತ್ತು ಬಲವನ್ನು ಪಡೆಯಲೇಬೇಕು.

ಧಮ್ಮವು ಬೆಳೆಯಲಿ. ಇತರರಿಗೆ ಸೇವೆ ಮಾಡಲು ಸಹಾಯ ಮಾಡಲು ನನ್ನ ಧಮ್ಮ ಪುತ್ರಿಯರು ಮತ್ತು ಧಮ್ಮ ಪುತ್ರರು ಧರ್ಮದಲ್ಲಿ ಬೆಳೆಯಲಿ. ನಿಮ್ಮ 'ಪಾರಮಿ'ಗಳನ್ನು ಬೆಳೆಸಿಕೊಳ್ಳುತ್ತಿರಿ ಮತ್ತು ಅನೇಕ ಜನರು ದುಃಖದಿಂದ ಹೊರಬರಲು ಸಹಾಯ ಮಾಡಿ. ಧರ್ಮವು ವಿಶ್ವದಾದ್ಯಂತ ಹರಡಲಿ. ಹೆಚ್ಚು ಹೆಚ್ಚು ಜನರು ದುಃಖದಿಂದ ಹೊರಬರಲಿ ಮತ್ತು ಬುದ್ಧರ ಧಮ್ಮ ಬೋಧನೆಯ ಪ್ರಯೋಜನಗಳನ್ನು ಅನುಭವಿಸಲಿ.

ಭವತು ಸಬ್ಬ ಮಂಗಳಂ

### ಪ್ರಶ್ನೋತ್ತರಗಳು

**ಪ್ರಶ್ನೆ:** ಗುರೂಜಿ, ಮುಂಬಯಿಯಲ್ಲಿ ನಿರ್ಮಿಸಿರುವ ಪಗೋಡವು ವಿಪಶ್ಯನವನ್ನು ಮತ್ತೊಂದು ಪಂಥವನ್ನಾಗಿ ಪರಿವರ್ತಿಸಬಹುದು ಎಂಬ ಭಯವಿದೆ!

**ಗೋಯಂಕಾಜಿ:** ಹೌದು, ಹೌದು. ಸರಿ, ಈ ಆಚಾರ್ಯರಿಗೆ ಇನ್ನೂ ಕೆಲವು ವರ್ಷಗಳ ಆಯಸ್ಸಿದ್ದರೆ, ನಾವು ಮಾಡುವ ಯಾವುದೂ ಒಂದು ಪಂಥವಾಗಿ ಪರಿವರ್ತನೆ ಆಗಲು ಬಿಡುವುದಿಲ್ಲ. ಬುದ್ಧರ ಬೋಧನೆಯನ್ನು ಒಂದು ಪಂಥವನ್ನಾಗಿ ಮಾಡಲು ಪಗೋಡವು ಒಂದು ಪರಿಕರವಾದರೆ, ಒಂದು ಸಂಘಟಿತ ಧರ್ಮವಾದರೆ, ನಮ್ಮ ಎಲ್ಲಾ ಬೋಧನೆಯೂ ಮಣ್ಣು ಪಾಲಾದಂತೆ–ಬುದ್ಧರ ಬೋಧನೆ ಏನು ಎಂಬುದನ್ನು ನಾವು ಅರ್ಥ ಮಾಡಿಕೊಂಡಿಲ್ಲ. ಜನರು ಬಂದು "ಓ, ಪಗೋಡ, ದಯವಿಟ್ಟು ಇದನ್ನು ನನಗೆ ಕೊಡು, ಇದರ ಅವಶ್ಯಕತೆ ನನಗಿದೆ" ಎಂದು ಪ್ರಾರ್ಥಿಸಲು ಈ ಪಗೋಡವನ್ನು ಉಪಯೋಗಿಸಿದರೆ, ಆಗ ಎಲ್ಲವೂ, ಖಂಡಿತವಾಗಿ, ಒಂದು ಸಂಘಟಿತ ಧರ್ಮವಾಗುತ್ತದೆ.

ಪಗೋಡವನ್ನು ನಾವು ಹೇಗೆ ಉಪಯೋಗಿಸುತ್ತೇವೆ? ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತೇವೆ. ಅಂದರೆ,ಧ್ಯಾನ ಮಾಡುವುದಕ್ಕೆ ಮತ್ತು ವಿಪಶ್ಯನವನ್ನು ಹರಡುವುದಕ್ಕೆ ಉಪಯೋಗಿಸುತ್ತೇವೆ. ವಿಪಶ್ಯನದ ಬಗ್ಗೆ ಜನರು ತಿಳಿಯುತ್ತಾರೆ. "ಎಂತಹ ಭವ್ಯವಾದ ಕಟ್ಟಡ, ಅದರಲ್ಲಿ ಏನಿದೆ?" ಎಂದು ಆಶ್ಚರ್ಯಪಟ್ಟು ಕುತೂಹಲದಿಂದ ಅನೇಕ ಜನರು ಬರುತ್ತಾರೆ. ಅವರು ಒಳಗೆ ಹೋದಾಗ ಸ್ವಲ್ಪ ಮಾಹಿತಿ ಪಡೆಯುತ್ತಾರೆ.

"ನೋಡಿ, ಬುದ್ಧ ಈ ರೀತಿ ಇದ್ದರು, ಅವರು ಬೋಧಿಸಿದ್ದು ಇದು, ಅವರ ಜೀವನದಲ್ಲಿ ಈ ಘಟನೆಗಳು ನಡೆದವು. ವಿಪಶ್ಯನವು ಅವರನ್ನು ಬುದ್ಧರನ್ನಾಗಿಸಿತು ಮತ್ತು ವಿಪಶ್ಯನವು ಅವರನ್ನು ಇಡೀ ವಿಶ್ವಕ್ಕೇ ಒಳ್ಳೆಯ ಧರ್ಮ ಬೋಧಕರನ್ನಾಗಿ ಮಾಡಿತು." ಜನರು ಎಷ್ಟೊಂದು ಪ್ರಯೋಜನ ಪಡೆಯುತ್ತಾರೆ!

ವಿಪಶ್ಯನದ ಬಗ್ಗೆ ತಿಳಿಯಲು ಅವರು ಪ್ರೇರಿತರಾದರೆ, ನಾವು ಮಾಹಿತಿ ನೀಡುತ್ತೇವೆ. ಹತ್ತು ಸಾವಿರ ಜನ ಭೇಟಿಕೊಡುತ್ತಾರೆ ಎಂದಿಟ್ಟುಕೊಳ್ಳಿ, ಅವರಲ್ಲಿ ನೂರು ಜನ ವಿಪಶ್ಯನ ಶಿಬಿರದಲ್ಲಿ ಭಾಗವಹಿಸಲು ಪ್ರೇರಣೆ ಪಡೆದರೆ, ನೂರು ಜನ ಪ್ರಯೋಜನ ಪಡೆಯುತ್ತಾರೆ. ಉಳಿದವರು ಕನಿಷ್ಠ ಪಕ್ಷ ಸರಿಯಾದ ಮಾಹಿತಿ ಪಡೆಯುತ್ತಾರೆ. ಹೀಗೆ ಈ ಪಗೋಡವು ಮತ್ತೊಂದು ಪಂಥವಾಗಿ ಬೆಳೆಯದಂತೆ ನೋಡಿಕೊಳ್ಳುತ್ತೇವೆ. ಇಲ್ಲವಾದರೆ ನಮ್ಮ ಉದ್ದೇಶವು ಈಡೇರುವುದಿಲ್ಲ.

**ಪ್ರಶ್ನೆ:** 1999 ಸಯಾಜಿ ಉ ಬಾ ಖಿನ್ ಅವರ ಜನ್ಮ ಶತಮಾನೋತ್ಸವ ವರ್ಷ ಮತ್ತು ತಮ್ಮ 75ನೇ ಜನ್ಮದಿನವೂ ಆಗಿದೆ. ಈ ಪ್ರಮುಖವಾದ ವರ್ಷವನ್ನು ನಾವು ಹೇಗೆ ಆಚರಿಸಲಿ?

**ಗೋಯಂಕಾಜಿ:** ಆ 75ನೇ ಜನ್ಮದಿನವನ್ನು ಮರೆತುಬಿಡಿ, ನಾನಿನ್ನೂ ಬದುಕಿದ್ದೇನೆ! ಶತಮಾನೋತ್ಸವ ವರ್ಷಕ್ಕೆ ಹೆಚ್ಚು ಮಹತ್ವ ಕೊಡಿ. ಈ ಯುಗದ ನಿಜವಾದ ಸಂತನ ಶತಮಾನೋತ್ಸವ ವರ್ಷ, ಅದ್ಭುತ! ಇದನ್ನು ಆಚರಿಸಲು ಸರಿಯಾದ ರೀತಿ ಯಾವುದು ಎಂಬುದರ ಬಗ್ಗೆ ನಾವೆಲ್ಲ ಚಿಂತಿಸಬೇಕು. "ಎಂತಹ ಅದ್ಭುತವಾದ ಸಂತರಾಗಿದ್ದರು" ಎಂದು ಹೊಗಳುತ್ತಾ ಯಾರಾದರೂ ಅವರ ಬಗ್ಗೆ ಲೇಖನಗಳನ್ನು, ಪುಸ್ತಕಗಳನ್ನು ಬರೆಯುವ ಯೋಚನೆಮಾಡಬಹುದು. ಆದರೆ ಅದು ಸಹಾಯ ಮಾಡುವುದಿಲ್ಲ. ಹೆಚ್ಚು ಹೆಚ್ಚು ಜನರು ವಿಪಶ್ಯನಕ್ಕೆ ಹೇಗೆ ಆಕರ್ಷಿತರಾಗುತ್ತಾರೆ? ಅಥವಾ ಕನಿಷ್ಠ ಪಕ್ಷ ಅದರ ಬಗ್ಗೆ ತಿಳಿಯಲು ಬರುತ್ತಾರೆ, ತಿಳಿದು ವಿಪಶ್ಯನ ಧ್ಯಾನ ಕಲಿಯುತ್ತಾರೆ. ಇದು ಬಹಳ ಮುಖ್ಯ.

ಅವರು ಎಂತಹ ಅದ್ಭುತವಾದ ವ್ಯಕ್ತಿಯಾಗಿದ್ದರು ಎಂದು ಚರಿತ್ರೆಯು ಅವರ ಬಗ್ಗೆ ಹೇಳುತ್ತದೆ. ಲೇಡಿ ಸಯಾದೋ ಅವರು ಮಹಾನ್ ವ್ಯಕ್ತಿಯಾಗಿದ್ದರು. ಏಕೆಂದರೆ ಗೃಹಸ್ಥರಿಗೆ ಮೊದಲು ವಿಪಶ್ಯನದ ಬಾಗಿಲನ್ನು ತೆರೆದವರು. ಸಯಾ ಥೇಜಿಯವರನ್ನು ಪ್ರಥಮ ಗೃಹಸ್ಥ ಆಚಾರ್ಯರನ್ನಾಗಿ ಮಾಡಿದರು. ನಂತರ ಸಯಾಜಿ ಉ ಬಾ ಖಿನ್ ಬಂದರು. "ಹೋಗಿ ಭೋದಿಸಿ, ಈ ರೀತಿಯಾಗಿ ಹೇಳಿಕೊಡಿ, ಈ ರೀತಿಯಾಗಿ ಹೇಳಿಕೊಡಿ..." ಎಂದು ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಾ ಇಡೀ ವಿಶ್ವಕ್ಕೆ ವಿಪಶ್ಯನ ಧ್ಯಾನದ ಬಾಗಿಲುಗಳನ್ನು ತೆರೆದರು. ಇಡೀ ವಿಶ್ವವೇ ಅವರಿಗೆ ಕೃತಜ್ಞತೆಯ ಭಾವ ಹೊಂದಿರುತ್ತದೆ. ಆದ್ದರಿಂದ ಈಗ ಅತ್ಯುತ್ತಮವಾದ ಮಾರ್ಗವೆಂದರೆ, ವಿಪಶ್ಯನದ ಬಗ್ಗೆ ಜನರಿಗೆ ಹೆಚ್ಚಿನ ಮಾಹಿತಿ ಕೊಡುವುದು. ಈ ಕಾರಣಕ್ಕಾಗಿ ಪಗೋಡವನ್ನು ನಿರ್ಮಿಸಲಾಗಿದೆ.

**ಪ್ರಶ್ನೆ:** ಸಿಡಿ–ರೋಮ್‌ನ ಹೊಸ ಸಂಪುಟಗಳನ್ನು ಹೊರತರಲು ಯೋಜಿಸಲಾಗಿದೆಯೇ ಮತ್ತು ಇದು 'ಪಟಿಪತ್ತಿ'ಗೆ ಪ್ರಸ್ತುತವಾಗಿದೆಯೇ?

**ಗೋಯಂಕಾಜಿ:** ಹೌದು, ಮೊದಲನೆಯ ಕೆಲಸ ಮುಗಿದಿದೆ. ಇದರಲ್ಲಿ ಕೆಲಸ ಮಾಡಿದ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಇದು ಅಂತಿಮವಲ್ಲ. ಇತರೆ ಅನುವಾದಗಳೂ ಬರುತ್ತವೆ. ಆದರೆ ಈ ಯೋಜನೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಒಂದು ಅಂಶ ಬಹಳ ಸ್ಪಷ್ಟವಾಗಬೇಕು. ಅದೇನೆಂದರೆ, 'ಪರಿಯತ್ತಿ'ಯನ್ನು (ಸಿದ್ಧಾಂತವನ್ನು) ಪ್ರಸಾರ ಮಾಡುವುದು ನಮ್ಮ ಅಂತಿಮ ಗುರಿಯಲ್ಲ. ನಮ್ಮ ಗುರಿ 'ಪಟಿಪತ್ತಿ' (ಪ್ರಾಕ್ಟೀಸ್). ಪರಿಯತ್ತಿ ಸಹಾಯ ಮಾಡುತ್ತದೆ.

ಈ ಎಲ್ಲಾ ಧರ್ಮ ಗ್ರಂಥಗಳನ್ನು ನಾವು ಏಕೆ ಸಂಗ್ರಹಿಸಿದ್ದೇವೆ? ಏಕೆಂದರೆ ಅನೇಕ ಗ್ರಂಥಗಳು, ಅನೇಕ ಪ್ರಾಚೀನ ಧರ್ಮಗ್ರಂಥಗಳು ಚೈನಾ, ಟಿಬೆಟ್ ಮತ್ತು ಇತರ ದೇಶಗಳಲ್ಲಿ ಇಲ್ಲದಂತಾಗಿದ್ದವು. ಯಾರಿಗೆ ಗೊತ್ತು, ಇನ್ನೂ ಹೆಚ್ಚು ಗ್ರಂಥಗಳು ಇಲ್ಲದಂತಾಗಬಹುದು. ನೂರು ವರ್ಷಗಳ ಹಿಂದೆ ಬರ್ಮಾದಲ್ಲಿ ಮುದ್ರಿಸಿದ ಪಾಲಿ ಗ್ರಂಥಗಳನ್ನು ನಾನು ನೋಡಿದಾಗ, ಆಕರ ಗ್ರಂಥಗಳ ಪಟ್ಟಿಯಲ್ಲಿ ಇರುವ ಅನೇಕ ಗ್ರಂಥಗಳು ಈಗ ಲಭ್ಯವಿಲ್ಲ. ಈ ಹನ್ನೆರಡು ವರ್ಷಗಳಲ್ಲೇ ಎಷ್ಟೊಂದು ಪುಸ್ತಕಗಳು ಇಲ್ಲದಂತಾಗಿವೆ. ಇನ್ನೂ ಹೆಚ್ಚಿನವು ಇಲ್ಲದಂತಾಗುವ ಮುನ್ನ ಅವುಗಳನ್ನು ಸಿಡಿ–ರೋಮ್‌ನಲ್ಲಿಟ್ಟು ರಕ್ಷಿಸುವುದು ನನ್ನ ಕರ್ತವ್ಯ.

ಈಗ ನಾವು ಸಿಡಿ–ರೋಮ್‌ನಲ್ಲಿ ಮೂರು ಲಿಪಿಗಳನ್ನು ಹೊಂದಿದ್ದೇವೆ ಮತ್ತು ಇನ್ನೂ ಎರಡು ಲಿಪಿಗಳನ್ನು ಸೇರಿಸಲಾಗುವುದು, ಇನ್ನೂ ನಾಲ್ಕು ಅಥವಾ ಐದನ್ನು ಸೇರಿಸುವ ಸಾಧ್ಯತೆ ಇದೆ. ಎಲ್ಲಾ ಸೇರಿ ಐದು,ಆರು ಆಗಬಹುದು; ನಮಗೆ ಹೇಳಲು ಆಗುವುದಿಲ್ಲ. ಆದರೆ ಮತ್ತೆರಡು ಲಿಪಿಗಳನ್ನು ಮತ್ತು ಇನ್ನೂ ಕೆಲವು ಸಂಪುಟಗಳನ್ನು ಸೇರಿಸಿದಾಗ (ಇದು ಕೆಲವು ತಿಂಗಳುಗಳಲ್ಲಿ ಪೂರ್ಣಗೊಳ್ಳಬಹುದು) ನಾವು ಅದನ್ನು ಅಂತರ್ಜಾಲದಲ್ಲಿ ಹಾಕಿ ಚರ್ಚೆಗೆ ಅವಕಾಶ ಕಲ್ಪಿಸುತ್ತೇವೆ.

ಇದರ ಮುಖ್ಯ ಉದ್ದೇಶ ಏನು? ಈಗ ಧಮ್ಮಗಿರಿಯು 'ಪಟಿಪತ್ತಿ'ಗೆ (ಧ್ಯಾನದ ಅಭ್ಯಾಸಕ್ಕೆ) ವಿಶ್ವದ ಕೇಂದ್ರವಾಗಿದೆ. 'ಪಟಿಪತ್ತಿ'ಯ ಎಲ್ಲಾ ಅಂಶಗಳ ಮೇಲೆ ಚರ್ಚೆ ಮಾಡಲು ಈ ಕೇಂದ್ರವು ಅಂತರ್ಜಾಲವನ್ನು ಉಪಯೋಗಿಸುತ್ತದೆ. ಹೀಗೆ ನಾವು ಅಂತರ್ಜಾಲದಲ್ಲಿ ಒಂದು ರೀತಿಯ ಚರ್ಚೆಯನ್ನು ಆರಂಭಿಸುತ್ತೇವೆ. "ಬುದ್ಧರ ಬೋಧನೆಯಲ್ಲಿ ಶರೀರದ ಸಂವೇದನೆಯು ಬಹಳ ಪ್ರಮುಖವಾದದು ಎಂದು ನಮಗನ್ನಿಸುತ್ತದೆ" ಎಂಬ ಅಂಶವನ್ನು ನಾವು ಮುಂದಿಡುತ್ತೇವೆ. "ಇಲ್ಲ, ಇಲ್ಲ. 'ವೇದನಾ' ಎಂದರೆ 'ಭಾವನೆ' ಎಂದರೆ 'ಮನಸ್ಸು' ಎಂದು ಜನರು ಪ್ರತ್ಯುತ್ತರ ನೀಡುತ್ತಾರೆ. ಆ ರೀತಿಯಾಗಿ ಸಂವಹನ ಪ್ರಾರಂಭವಾಗಲಿ. ನಾವು ತಪ್ಪು ಮಾಡಿದರೆ, ಅದನ್ನು ಸರಿಪಡಿಸಲು ನಾವು ನಾಚಿಕೆಪಡುವುದಿಲ್ಲ. ಆದರೆ ಇತರರು ಎಲ್ಲಾದರೂ ತಪ್ಪಾಗಿ ಅರ್ಥೈಸಿಕೊಂಡಿದ್ದರೆ, ಕೊನೇಪಕ್ಷ ಬುದ್ಧರು ಬೋಧಿಸಿದುದರ ಸರಿಯಾದ ಅನುವಾದ ಏನು ಎಂಬುದನ್ನು ತಿಳಿಯುತ್ತಾರೆ.

ಇದು ಒಂದು ಉದಾಹರಣೆ ಮಾತ್ರ. ಈ ರೀತಿಯ ಅನೇಕ ವಿಷಯಗಳನ್ನು ನಾವು ಚರ್ಚಿಸಬಹುದು. ಒಂದು ನಿದರ್ಶನವೆಂದರೆ, 'ಸಂಪಜನ್ಯ' ಎಂದರೆ ಏನು ಎಂಬ ಪ್ರಶ್ನೆ? ಕೆಲವು ವೇಳೆ ಅಟ್ಠಕಥೆಗಳು ಸರಿಯಾದ ಉತ್ತರ ಕೊಡದೇ ಇರಬಹುದು. ಅಟ್ಟಕಥಾ ಮತ್ತು ತಿಪಿಟಕದ

ಮಧ್ಯೆ ವ್ಯತ್ಯಾಸವಿದ್ದರೆ, ನಮಗೆ ಬಹಳ ಮುಖ್ಯವಾಗುತ್ತದೆ. ಬುದ್ಧಘೋಶರ ಬದಲಿಗೆ ನಾನು ಬುದ್ಧರನ್ನು ಕೇಳುತ್ತೇನೆ. "ನೀವು ಏನು ಹೇಳುತ್ತೀರಿ ಸರ್? ಇದನ್ನು ನಾನು ಅರ್ಥ ಮಾಡಿಕೊಳ್ಳುವುದು ಹೇಗೆ? ಅಟ್ಠಕಥೆಗಳು ಸ್ಪಷ್ಟವಾದ ವಿವರಣೆಯನ್ನು ಕೊಟ್ಟರೆ ಅದು ಪರಿಪೂರ್ಣವಾಗಿ ಸರಿ. ಆದರೆ ವಿವರಣೆಯು ಸ್ಪಷ್ಟವಾಗಿಲ್ಲದಿದ್ದರೆ, ಬುದ್ಧರು ಹೇಳಿರುವುದು ನನಗೆ ಹೆಚ್ಚು ಅಧಿಕೃತವಾಗುತ್ತದೆ. ಇನ್ನು ಕೆಲವು ತಿಂಗಳುಗಳಲ್ಲಿಯೇ ಅಂತರ್ಜಾಲದಲ್ಲಿ ಹಾಕಿದ ಮೇಲೆ ಈ ಎಲ್ಲಾ ವಿಷಯಗಳ ಮೇಲೆ ಅಂತರರಾಷ್ಟ್ರೀಯ ಚರ್ಚೆಗಳು ಆರಂಭವಾಗುತ್ತವೆ.

ಈಗ ಈ ಸಿಡಿ–ರೋಮ್‌ನ ಕಾರಣದಿಂದ ಒಂದು ಅದ್ಭುತವಾದ ಅವಕಾಶ ಬಂದಿದೆ. ಅದಕ್ಕೆ ಒಂದು ಉದಾಹರಣೆ ಇಲ್ಲಿದೆ: ವಿಪಶ್ಯನವು ಭಾರತದಲ್ಲಿ ಸ್ಥಾಪಿತಗೊಂಡು ಜಗತ್ತಿನಾದ್ಯಂತ ಹರಡಬೇಕು ಎಂಬ ನಮ್ಮ ಆಚಾರ್ಯರ ಆಶಯವನ್ನು ಪೂರೈಸಲು ನಾನು ಈ ದೇಶಕ್ಕೆ ಬಂದಾಗ, ನನ್ನ ಮನಸ್ಸಿನಲ್ಲಿ ಬಂದ ಮೊದಲ ವಿಷಯವೆಂದರೆ, "ನಾನು ಬುದ್ಧರ ಬೋಧನೆಯನ್ನು ಬುದ್ಧಿಸಂ ಎಂದು ಬೋಧಿಸಲು ಇಲ್ಲಿಗೆ ಬಂದಿಲ್ಲ. ಅದನ್ನು ಧಮ್ಮ ಎಂದು ಬೋಧಿಸುತ್ತೇನೆ. ನಾನು ಬುದ್ಧಿಸಂ ಅನ್ನು ಬೋಧಿಸಲು ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದ ಕ್ಷಣ, ಅದನ್ನು ಕಲಿಯಲು ನನ್ನ ಜೊತೆ ಹತ್ತು ದಿನಗಳನ್ನು ಕಳೆಯುವುದು ಹಾಗಿರಲಿ, ಯಾರೂ ನನ್ನ ಮಾತುಗಳನ್ನು ಕೇಳಿಸಿಕೊಳ್ಳುವುದಿಲ್ಲ." ಆದರೆ ಇದು ನನಗೆ ಒಂದು ತಂತ್ರಗಾರಿಕೆ ಆಗಿರಲಿಲ್ಲ. ಇದು ನನ್ನ ಗಾಢ ನಂಬಿಕೆ ಯಾಗಿತ್ತು. ಏಕೆಂದರೆ ಬುದ್ಧರು ಪಂಥೀಯತೆಯ ವಿರುದ್ಧವಾಗಿದ್ದರು.

ಅನೇಕ ವರ್ಷಗಳ ನಂತರ ಸಿಡಿ–ರೋಮ್ ಬಂದಿತು. ಇದರಲ್ಲಿ ಕೆಲಸ ಮಾಡಿದ ಒಬ್ಬ ವ್ಯಕ್ತಿಯನ್ನು ನಾನು ಕೇಳಿದೆ, "ಎಲ್ಲಿಯಾದರೂ 'ಬೌದ್ಧ' ಅಂದರೆ ಬುದ್ಧ ಧರ್ಮೀಯ ಅಥವಾ ಬುದ್ಧ ಧರ್ಮ ಎಂದು ಬರೆಯಲಾಗಿದೆಯೇ ದಯವಿಟ್ಟು ನೋಡು ಎಂದು." 146 ಸಂಪುಟಗಳಿವೆ, 55,000ಕ್ಕಿಂತಲೂ ಹೆಚ್ಚು ಪುಟಗಳಿವೆ, ಲಕ್ಷಾಂತರ ಶಬ್ದಗಳಿವೆ. ಆದರೆ ಎಲ್ಲಿಯೂ 'ಬೌದ್ಧ' ಎಂಬ ಒಂದು ಪದವೂ ಇಲ್ಲ. "ಬುದ್ಧಿಸಂ (ಬೌದ್ಧ ಧರ್ಮ) ಎಂಬ ಪದವನ್ನು 'ಅಟ್ಠಕಥಾ' ತಿಪಿಟಕ ಅಥವಾ 'ಟಿಕಾ' ಎಂಬ ಪದವನ್ನು ಎಲ್ಲಿಯೂ ಉಪಯೋಗಿಸಿಲ್ಲ. ಎಲ್ಲಿಯೂ ಈ ಪದ ಸಿಗಲಿಲ್ಲ. ನಾನು ಬಹಳ ಸಂತೋಷಗೊಂಡೆ.

ಬುದ್ಧರ ಬೋಧನೆಯು ಹೇಗೆ ಹಾಳಾಯಿತು? ಈಗ ನಾವು ಈ ಬೌದ್ಧ ಎಂಬ ಪದವು ಹೇಗೆ ಪ್ರಾರಂಭವಾಯಿತು ಎಂಬುದನ್ನು ತನಿಖೆ ಮಾಡಬೇಕಾಗಿದೆ. ಯಾರು ಈ ಪದವನ್ನು ಮೊದಲು ಉಪಯೋಗಿಸಿದರು? ನನ್ನ ಪ್ರಕಾರ, ನಾನು ಬಹಳ ನೇರವಾಗಿ ಹೇಳುತ್ತೇನೆ, ಯಾರು ಮೊದಲು ಬೌದ್ಧ ಧರ್ಮ (ಬುದ್ಧಿಸಂ) ಅಥವಾ ಬೌದ್ಧ ಪದವನ್ನು ಯಾವುದೇ ಭಾಷೆಯಲ್ಲಿ ಉಪಯೋಗಿಸಿರುವನೋ ಅವನು ಬುದ್ಧರ ಬೋಧನೆಯ ದೊಡ್ಡ ಶತ್ರು ಆಗಿದ್ದಾನೆ. ಏಕೆಂದರೆ ಬೋಧನೆಯು ಸಾರ್ವತ್ರಿಕವಾಗಿತ್ತು ಮತ್ತು ಅಜ್ಞಾನದಿಂದ ಅವನು ಇದನ್ನು ಒಂದು ಪಂಥವನ್ನಾಗಿ ಮಾಡಿದ. ಬೌದ್ಧಧರ್ಮವು ಬೌದ್ಧರಿಗೆ ಆದರೆ ಧಮ್ಮ(ಧರ್ಮ)ವು ಎಲ್ಲರಿಗಾಗಿ ಇದೆ. ನೀವು ಬೌದ್ಧ ಧರ್ಮ ಎಂದು ಹೇಳಿದ ಕೂಡಲೇ ಬುದ್ಧರ ಬೋಧನೆಯನ್ನು ಒಂದು ಗೊತ್ತಾದ ಜನಗಳ ಗುಂಪಿಗೆ ಸೀಮಿತಗೊಳಿಸುತ್ತೀರಿ. ಇದು ಸಂಪೂರ್ಣವಾಗಿ ತಪ್ಪು.

ಆದ್ದರಿಂದ ನಾವು ವಿಚಾರಣೆ ಮಾಡೋಣ ಮತ್ತು ಈ ವಿಷಯವನ್ನು ಅಂತರ್ಜಾಲದಲ್ಲಿ ಜನರೊಂದಿಗೆ ಚರ್ಚಿಸೋಣ. ನಾವು ಜನರಿಗೆ ಮಾಹಿತಿ ಕೊಡೋಣ ಮತ್ತು ಅವರ ಬಳಿ ಬೇರೆ ಯಾವುದೇ ಮಾಹಿತಿ ಇದ್ದರೆ ಅದನ್ನು ನಾವು ಪಡೆದುಕೊಳ್ಳೋಣ. ಇಲ್ಲಿರುವ ಈ ಕೇಂದ್ರವು ವಿಪಶ್ಯನ ಧ್ಯಾನಕ್ಕೆ ಸಂಬಂಧಿಸಿದ ಬುದ್ಧರ ಬೋಧನೆಯನ್ನು ಚರ್ಚಿಸಲು ಪ್ರಮುಖವಾಗಿದೆ. ಯಾವುದೇ ರೀತಿಯ ತತ್ವ ಸಿದ್ಧಾಂತಕ್ಕೆ ಸಂಬಂಧಿಸಿದ ವಾದ ಬಂದರೆ, "ಬೇಡ, ಬೇಡ, ನಿಮಗೆ ಧನ್ಯವಾದಗಳು. ಅದನ್ನು ನಾವು ಚರ್ಚಿಸುವುದಿಲ್ಲ. ವಿಪಶ್ಯನಕ್ಕೆ ಬೆಂಬಲ ಕೊಡುವ ವಿಷಯಗಳನ್ನು ಮಾತ್ರ ನಾವು ಚರ್ಚಿಸುತ್ತೇವೆ" ಎಂದು ನಾವು ಹೇಳೋಣ.

**ಪ್ರಶ್ನೆ:** ವಿಪಶ್ಯನ ಬೋಧನೆಯಲ್ಲಿ ಸೈದ್ಧಾಂತಿಕ ಅಂಶಗಳಲ್ಲಿ ಅನೇಕವು ಸರಿ ಎಂದು ತೋರುವುದಿಲ್ಲ. ಉದಾಹರಣೆಗೆ, ಬುದ್ಧರ ಲೆಕ್ಕವಿಲ್ಲದಷ್ಟು ಜನ್ಮಗಳ ಬಗ್ಗೆ ಮತ್ತು ಅವರ ಅತೀಂದ್ರಿಯ ಶಕ್ತಿಗಳ ಬಗ್ಗೆ ಹೇಳಲಾಗಿದೆ. ವಿಪಶ್ಯನದಿಂದ ಪ್ರಯೋಜನ ಪಡೆಯಬೇಕಾದರೆ ಇದೆಲ್ಲವನ್ನು ಒಪ್ಪಿಕೊಳ್ಳುವ ಅವಶ್ಯಕತೆ ಇದೆಯೇ?

**ಗೋಯಂಕಾಜಿ:** ಅದರ ಅವಶ್ಯಕತೆಯಿಲ್ಲ. ಈಗ ತಾನೇ ನಾನು ಹೇಳಿದಂತೆ, ಹಿಂದಿನ ಅಥವಾ ಮುಂದಿನ ಜನ್ಮಗಳ ಬಗ್ಗೆ ನಂಬಿಕೆಯಿಲ್ಲದ ಜನರು ಬರುತ್ತಾರೆ. ಅವರು ಪ್ರಗತಿ ಹೊಂದುತ್ತಾರೆ. ಜನರು ಜನ್ಮಗಳ ಬಗ್ಗೆ ನಂಬುವ ಅವಶ್ಯಕತೆಯಿಲ್ಲ. ಆದರೆ ಜವಾಬ್ದಾರಿಯುತ ಆಚಾರ್ಯರಾಗಿ, ನನಗಿರುವ ತಿಳುವಳಿಕೆ ಮತ್ತು ಅನುಭವದ ಸತ್ಯಾಂಶಗಳನ್ನು ಅವು ಇದ್ದಂತೆಯೇ ಜನರ ಮುಂದಿಡಬೇಕು. ಕೇವಲ ಜನರನ್ನು ಸಂತೋಷಪಡಿಸುವುದಕ್ಕಾಗಿ, "ಓಹ್, ಇಲ್ಲ, ಹಿಂದಿನ ಜನ್ಮವಿಲ್ಲ ಮುಂದಿನ ಜನ್ಮವಿಲ್ಲ, ಅಂಥದ್ದೇನೂ ಇಲ್ಲ" ಎಂದು ಹೇಳಲು ಸಾಧ್ಯವಿಲ್ಲ. ಆಗ ನಾನು ಜನರನ್ನು ದಾರಿ ತಪ್ಪಿಸಿದಂತಾಗುತ್ತದೆ. ಆದ್ದರಿಂದ ನಾನು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಜನರು ಒಪ್ಪಬಹುದು ಅಥವಾ ಒಪ್ಪದಿರಬಹುದು, ಅದು ನನ್ನ ಸಮಸ್ಯೆಯಲ್ಲ.

**ಪ್ರಶ್ನೆ:** ನೀವು ದೇವಲೋಕದಲ್ಲಿ ಜನಿಸಿದಾಗ, ಮನುಷ್ಯರಂತೆ ದೇವ ದಂಪತಿಗಳಿಗೆ ಜನಿಸುತ್ತೀರಾ?

**ಗೋಯಂಕಾಜಿ:** ನಾನು ಅಂತಹ ಜನ್ಮ ಪಡೆದಾಗ ನಾನು ನಿನಗೆ ಹೇಳುತ್ತೇನೆ. ಅದು ಈಗ ಏಕೆ? (ನಗುತ್ತಾರೆ)

**ಪ್ರಶ್ನೆ:** ನೀವು ಬುದ್ಧರ ಬೋಧನೆಗಳನ್ನು ವಿವರಿಸುತ್ತೀರಿ. ಆದರೆ ನೀವು ಅವುಗಳನ್ನು ಬೌದ್ಧ ಧರ್ಮ ಎಂದು ಕರೆಯುವುದಿಲ್ಲ. ಬೌದ್ಧ ಧರ್ಮವನ್ನೇಕೆ ನೀವು ಬೋಧಿಸುವುದಿಲ್ಲ?

**ಗೋಯಂಕಾಜಿ:** ಸರಿ, ಬುದ್ಧರು ಎಂದಿಗೂ ಬೌದ್ಧ ಧಮ್ಮವನ್ನು ಬೋಧಿಸಲಿಲ್ಲ. ಅವರು ಧಮ್ಮವನ್ನು ಮಾತ್ರ ಬೋಧಿಸಿದರು. ಬೌದ್ಧ ಧಮ್ಮವನ್ನು ಬೋಧಿಸಲು ನಾನು ಯಾರು? ನಾನು ಕೇವಲ ಬುದ್ಧರ ಮಗ; ನಾನು ಇದನ್ನು ಅವರಿಂದ ಪಿತ್ರಾರ್ಜಿತವಾಗಿ ಪಡೆದಿದ್ದೇನೆ. ಆದ್ದರಿಂದ ಬುದ್ಧರು ಬೋಧಿಸಿದಂತೆಯೇ ನಾನು ಬೋಧಿಸಬೇಕು. ನಾವು ಇದನ್ನು ಬೌದ್ಧ (ಧರ್ಮ) ಎಂದು ಕರೆದರೆ, ಆಗ ಅದು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗುತ್ತದೆ. ಬೌದ್ಧ ಧರ್ಮ ಬೌದ್ಧರಿಗೆ, ಹಿಂದು ಧರ್ಮ ಹಿಂದುಗಳಿಗೆ, ಜೈನ ಧರ್ಮ ಜೈನರಿಗೆ, ಇದು ಧರ್ಮವನ್ನು ಮಿತಿಗೊಳಪಡಿಸುತ್ತದೆ. ಆದರೆ ಧರ್ಮವು ಅನಿಯಮಿತ. ಆದ್ದರಿಂದ ಧರ್ಮವನ್ನು ಬೋಧಿಸುವುದೇ ಉತ್ತಮ. ಅದನ್ನು ಯಾರು ಬೇಕಾದರೂ ಅಭ್ಯಾಸ ಮಾಡಬಹುದು ಮತ್ತು ಒಂದೇ ತೆರನಾದ ಫಲಿತಾಂಶಗಳನ್ನು, ಪ್ರಯೋಜನಗಳನ್ನು ಪಡೆಯಬಹುದು.

**ಪ್ರಶ್ನೆ:** ಧಮ್ಮಗಿರಿಯಲ್ಲಿ ಒಂದು ಭವ್ಯವಾದ ಪಗೋಡಾವನ್ನು ನಿರ್ಮಿಸಲಾಗಿದೆ. ನಮ್ಮ ವಿಪಶ್ಯನದ ಅಭ್ಯಾಸದೊಂದಿಗೆ ಅದು ಯಾವ ಸಂಬಂಧವನ್ನು ಹೊಂದಿದೆ?

**ಗೋಯಂಕಾಜಿ:** ಪಗೋಡಾದ ಮೇಲಿನ ಅಲಂಕಾರವು ಕೇಕ್‌ನ ಮೇಲೆ ಮಾಡಿದ ಅಲಂಕಾರದ ತರಹ. ಆದ್ದರಿಂದ ಧ್ಯಾನಕೋಶಗಳಲ್ಲಿ ಧ್ಯಾನ ಮಾಡುವ ವಿಪಶ್ಯನ ಸಾಧಕರಿಗೆ ಪಗೋಡವು ಮುಖ್ಯವಾಗುತ್ತದೆ. ಪಗೋಡದ ಅಲಂಕಾರವು ಕೃತಜ್ಞತೆಯ ಬಹಿರಂಗ ಪ್ರದರ್ಶನ. ಧಮ್ಮವು ಭಾರತದಿಂದ ನೆರೆಯ ದೇಶಗಳಿಗೆ ಹೋಯಿತು. ಧರ್ಮವು ಭಾರತದಿಂದ, ಬುದ್ಧರ ನಾಡಿನಿಂದ ಬಂದಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಲು ಅಲ್ಲಿಯ ಜನರು ಭಾರತೀಯ ವಿನ್ಯಾಸವನ್ನು ಅಳವಡಿಸಿಕೊಂಡರು. ಈ ಕಾರಣದಿಂದ ಭಾರತದ ಬಗ್ಗೆ ಅಲ್ಲಿಯ ಜನರು ಇಂದಿಗೂ ಬಹಳ ಗೌರವ ಮತ್ತು ಕೃತಜ್ಞತೆಯನ್ನು ಹೊಂದಿದ್ದಾರೆ. ಧಮ್ಮವು ಬರ್ಮಾ ದೇಶಕ್ಕೆ ಹೋದಾಗ ಅಲ್ಲಿ ಭಾರತದ ಸಾಂಚಿ ಸ್ತೂಪದ ಮಾದರಿಯಲ್ಲಿ ಸ್ತೂಪಗಳನ್ನು ನಿರ್ಮಿಸಿದರು. ನಂತರದಲ್ಲಿ ವಿವಿಧ ರೀತಿಯ ಅಲಂಕಾರ ಗಳನ್ನು ಅಳವಡಿಸಿದರು.

ಅದೇ ತರಹ ಈಗ, ಇಪ್ಪತ್ತು ಶತಮಾನಗಳ ನಂತರ ಧಮ್ಮವು ಬರ್ಮಾದಿಂದ ಮರಳಿದೆ. ಇಲ್ಲಿಯ ಜನರು ಇದನ್ನು ಅರ್ಥಮಾಡಿ ಕೊಂಡು ಬರ್ಮಾ ದೇಶದ ಬಗೆಗೆ ಕೃತಜ್ಞತಾ ಭಾವ ಹೊಂದುವುದು ಉಚಿತವಾಗಿದೆ. ಬರ್ಮಾವು ಎಂತಹ ಅದ್ಭುತವಾದ ದೇಶವೆಂದರೆ, ಧ್ಯಾನ ಸಾಧನೆಯ ಪರಿಶುದ್ಧತೆಯನ್ನು ಕಾಪಾಡಿತು. ಆದ್ದರಿಂದ, 'ವಿಪಶ್ಯನ ಧ್ಯಾನ ಸಾಧನೆಯು ಬರ್ಮಾದಿಂದ ಬಂದಿದೆ, ಆ ಕಾರಣದಿಂದ ಅವರು ಪ್ರಯೋಜನ ಪಡೆಯಲು ಸಾಧ್ಯವಾಯಿತು ಎಂದು ಜನರಿಗೆ ನೆನಪಿಸಲು ಈ ಎಲ್ಲಾ ವಿನ್ಯಾಸಗಳನ್ನು ಅಳವಡಿಸಿಕೊಳ್ಳಲಾಗಿದೆ.

**ಪ್ರಶ್ನೆ:** ಆದರೆ ಗುರೂಜಿ ಇದರಿಂದ ಒಂದು ಅಪಾಯವಿದೆ ಎನಿಸುತ್ತದೆ. ಪಗೋಡವು ಎಷ್ಟೊಂದು ಸುಂದರವಾಗಿದೆ ಎಂದರೆ, ನಾವು

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 20th of February Posted At : Bengaluru PSO, B'luru 26. Price(Annual)Rs.30.**

ಧ್ಯಾನ ಮಾಡುವಾಗ ಅದು ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತದೆ.

**ಗೋಯಂಕಾಜಿ:** ಹೌದು, ಅದು ಸುಂದರವಾಗಿದೆ ಏಕೆಂದರೆ ಧಮ್ಮವು ಸುಂದರವಾಗಿದೆ. ಧ್ಯಾನ ಮಾಡುವಾಗ ಅದು ನಿಮ್ಮ ಮನಸ್ಸಿನಲ್ಲಿ ಬಂದರೆ, ಅದರ ಹಿಂದಿರುವ ಅರ್ಥವನ್ನು ಈ ಚಿಹ್ನೆಯು ನಿಮಗೆ ಬೋಧಿಸುತ್ತದೆ. ಅದೇ 'ಅನಿಚ್ಚ, ಅನಿಚ್ಚ ಅನಿಚ್ಚ' ಅಂದರೆ ಬದಲಾಗುತ್ತಿದೆ, ಬದಲಾಗುತ್ತಿದೆ, ಬದಲಾಗುತ್ತಿದೆ.

**ಪ್ರಶ್ನೆ:** ಸ್ವ-ಕೇಂದ್ರಿತವಲ್ಲದೆ ಒಬ್ಬ ವ್ಯಕ್ತಿಯು ಸಂಗೀತ, ನೃತ್ಯ ಮಾಡಲು ಅಥವಾ ಕಲಾಕೃತಿಯನ್ನು ಸೃಷ್ಟಿಸಲು ಸಾಧ್ಯವೇ? ಮನಸ್ಸಿನ ಸಮತೋಲನ ವಿಲ್ಲದೆ ವ್ಯಕ್ತಿಯು ತನ್ನನ್ನು ತಾನು ವ್ಯಕ್ತಪಡಿಸಲು ನಿಜವಾಗಿಯೂ ಸಾಧ್ಯವೇ?

**ಗೋಯಂಕಾಜಿ:** ಸಮತೋಲನದ ಮನಸ್ಸು ಬಹಳ ಮುಖ್ಯ. ಆದರೆ ಸಂಪೂರ್ಣವಾಗಿ ಅಹಂನಿಂದ ಮುಕ್ತವಾದ ಹಂತವನ್ನು ತಲುಪಲು ದೀರ್ಘ ಸಮಯ ಹಿಡಿಯುತ್ತದೆ. ಅರಹಂತನ ಹಂತವನ್ನು ತಲುಪಿದ ವ್ಯಕ್ತಿಯಲ್ಲಿ ಅಹಂ ಇರುವುದಿಲ್ಲ. ಅದು ಮನಸ್ಸಿನ ಆಳದಿಂದ ಕರಗಿ ಹೋಗುತ್ತದೆ. ಆದರೆ ಸಾಮಾನ್ಯ ವಿಪಶ್ಯನ ಧ್ಯಾನ ಸಾಧಕರು ಕನಿಷ್ಠ ಪಕ್ಷ ಅವರ ಅಹಂ ಕರಗುತ್ತಿದೆ ಎಂಬುದು ಮನವರಿಕೆಯಾಗಬೇಕು. ಯಾವುದೇ ಕಲಾವಿದ ವಿಪಶ್ಯನ ಧ್ಯಾನವನ್ನು ಸರಿಯಾಗಿ ಅಭ್ಯಾಸ ಮಾಡಿದರೆ ಅವರ ಕಲೆಯ ಕ್ಷೇತ್ರದಲ್ಲಿ, ಅದು ಯಾವುದೇ ಆಗಿರಲಿ, ದೊಡ್ಡ ಬದಲಾವಣೆಯನ್ನು ಕಾಣುತ್ತಾನೆ. ಕಲೆಯು ಪರಿಶುದ್ಧವಾಗುತ್ತದೆ. ಅಂದರೆ ಕಲೆಯನ್ನು ಇತರರ ಮನಸ್ಸಿನಲ್ಲಿ ಕಾಮ, ಕ್ರೋಧ ಅಥವಾ ಮತ್ಸರವನ್ನು ಉದ್ದೀಪಿಸಲು ಬಳಸುವುದಿಲ್ಲ. ವಿಪಶ್ಯನ ಧ್ಯಾನದ ಅಭ್ಯಾಸದಿಂದ ವ್ಯಕ್ತಿಯು ಉತ್ತಮ ಕಲಾವಿದನಾಗುತ್ತಾನೆ. ಇದರ ಪರಿಣಾಮವಾಗಿ, ಕಲಾ ಮಾಧ್ಯಮದ ಮೂಲಕ ಅವನು ಜನರಿಗೆ ಶಾಂತಿ ಮತ್ತು ಸಾಮರಸ್ಯದ ಭಾವ ಮೂಡಿಸುತ್ತಾನೆ. ಇಂತಹ ಆರೋಗ್ಯಕರವಾದ ಬದಲಾವಣೆಯ ದಿಕ್ಕಿನ ಕಡೆಗೆ ಸಾಗುತಿದ್ದಾನೋ ಇಲ್ಲವೋ ಎಂಬುದನ್ನು ವ್ಯಕ್ತಿಯು ನಿರ್ಣಯಿಸಬೇಕು

******

### ಧಮ್ಮ ಪಫುಲ್ಲಾ, ಬೆಂಗಳೂರು

**2026** : 20 ದಿನಗಳ ದೀರ್ಘ ಶಿಬಿರ ಜನವರಿ 16 ರಿಂದ ಫೆಬ್ರವರಿ 6. 30 ದಿನಗಳ ಶಿಬಿರ ಜನವರಿ 16 ರಿಂದ ಫೆಬ್ರವರಿ 16.

**ಹತ್ತು ದಿನದ ಶಿಬಿರಗಳು** : ಫೆಬ್ರವರಿ 19–ಮಾರ್ಚ್ 2, ಮಾರ್ಚ್ 5–16, ಏಪ್ರಿಲ್ 8–19, 22–3 ಮೇ– 6–17, ಜೂನ್ 3–14, 17–28, ಜುಲೈ 1–12, 15–26, 29–9 ಆಗಸ್ಟ್ 12–23.

**ಸತಿಪಟ್ಠಾನ ಶಿಬಿರ** : ಮಾರ್ಚ್ 23–31

**ಮೂರು ದಿನದ ಶಿಬಿರಗಳು** : ಏಪ್ರಿಲ್ 2–5, ಆಗಸ್ಟ್ 27–30. **ಹದಿಹರೆಯದವರ ಶಿಬಿರ** : ಮೇ 20–28.

**ವಿಳಾಸ** : ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ: 256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 63605 87970 **ಇ–ಮೇಲ್** : info @ paphulla. dhamma. org;website; www. vridhamma. org.

### ಧಮ್ಮ ನಗರಿ, ದಾವಣಗೆರೆ.

**2026 ಹತ್ತು ದಿನದ ಶಿಬಿರಗಳು** : ಜನವರಿ 7–18, 28 ರಿಂದ ಫೆಬ್ರವರಿ 8, ಫೆಬ್ರವರಿ 11–22, ಮಾರ್ಚ್ 4– 15, ಮಾರ್ಚ್ 22–ಏಪ್ರಿಲ್ 2, ಏಪ್ರಿಲ್ 15–26, ಏಪ್ರಿಲ್ 29–ಮೇ 10, ಮೇ 20–31, ಜೂನ್ 6–17, ಜೂನ್ 24–ಜುಲೈ5, ಜುಲೈ 15–26, ಆಗಸ್ಟ್ 5–16, ಆಗಸ್ಟ್ 26–ಸೆಪ್ಟಂಬರ್ 6, 16–27, ಅಕ್ಟೋಬರ್ 7–18, ನವೆಂಬರ್ 11–22, ಡಿಸೆಂಬರ್ 2–13, 20–31, **ಮೂರು ದಿನದ ಶಿಬಿರ** : ಅಕ್ಟೋಬರ್ 29–ನವೆಂಬರ್ 1.

ವೆಬ್‌ಸೈಟ್ : https://www. dhamma. org/en/schedules/schnagari

**ಗೂಗಲ್ ಮ್ಯಾಪ್** : https://maps.app.goo.gl/CZoHPKWSeeUNSJKZ6

Contact Numbers : 90087 33008, 94485 88789, 87226 05694

### ಧಮ್ಮ ನಗರಿ, ಉಡುಪಿ ಜಿಲ್ಲೆ.

**2026– ಹತ್ತು ದಿನದ ಶಿಬಿರಗಳು** : ಜನವರಿ 14–25, ಫೆಬ್ರವರಿ 11–22, ಮಾರ್ಚ್ 4–15, ಏಪ್ರಿಲ್ 8–19, ಮೇ 6–17, ಜೂನ್ 3–14, ಜುಲೈ 1–12, ಆಗಸ್ಟ್ 12–23.

**ಧಮ್ಮವನ, ಮೈಸೂರು 2026– ಹತ್ತು ದಿನದ ಶಿಬಿರಗಳು** : ಫೆಬ್ರವರಿ 18–ಮಾರ್ಚ್ 1, 4–15, ಏಪ್ರಿಲ್ 15–26, ಮೇ 6–17, ಜೂನ್ 10–21, ಜುಲೈ 28–ಆಗಸ್ಟ್ 8, 19–30, ಸೆಪ್ಟಂಬರ್ 16–27,

ಮೂರು ದಿನಗಳ ಶಿಬಿರ : ಜನವರಿ 23–26, ಜೂನ್25–28, ಡಿಸೆಂಬರ್ 24–27.

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma. org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

### ಧಮ್ಮ ಸುಖಾಲಯ, ಬೆಂಗಳೂರು

**10 ದಿನದ ಶಿಬಿರಗಳು–2025:** ಡಿಸೆಂಬರ್ 24–4 ಜನವರಿ ನಿರಂತರವಾಗಿ ಒಂದು ದಿನದ ಶಿಬಿರಗಳು ನಡೆಯುತ್ತವೆ.

ವಿಳಾಸ : ಅರೆಹಳ್ಳಿ, ಹೊಸಕೋಟೆ ತಾಲೂಕು, ಬೆಂಗಳೂರು. website : sukhalaya.dhamma.org

ಫೋನ್ : 099004–52939

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, # 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
# 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ,
ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004.

ಗೆ,
______________________
______________________
______________________